**ಕರ್ನಾಟಕ ಸರ್ಕಾರ**

ಸಂ:ಗ್ರಾಅಪ 46 ಗ್ರಾನೀಸ (2)14

ಕರ್ನಾಟಕ ಸರ್ಕಾರದ ಸಚಿವಾಲಯ
ಬಹುಮಹಡಿಗಳ ಕಟ್ಟಡ,
ಬೆಂಗಳೂರು, ದಿನಾಂಕ:11.8.2014
13

ಇವರಿಂದ:
ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ,
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ.

ಪ್ರಾಮುಖ್ಯವಾದುದು

ಇವರಿಗೆ:
1. ಮ್ಯಾನೇಜರ್,
ಸಿಂಡಕೇಟ್ ಬ್ಯಾಂಕ್,
BWSSB Branch, ರಾಜಧೂತ್ ಕಾಂಪ್ಲೆಕ್ಸ್,
ಅವೆನ್ಯೂ ರಸ್ತೆ, **ಬೆಂಗಳೂರು-09**.

2. ಮ್ಯಾನೇಜರ್
ಕಾರ್ಪೋರೇಷನ್ ಬ್ಯಾಂಕ್,
ಮಲ್ಲೇಶ್ವರಂ ಶಾಖೆ, **ಬೆಂಗಳೂರು-03**.

ಮಾನ್ಯರೆ,

ವಿಷಯ: ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆಯಡಿ ಅನುಷ್ಠಾನಗೊಳಿಸಲಾಗುತ್ತಿರುವ ರಾಷ್ಟ್ರೀಯ ಗ್ರಾಮೀಣ ಕುಡಿಯುವ ನೀರು ಸರಬರಾಜು ಯೋಜನೆಯ (NRDWP) ಕಾಮಗಾರಿಗಳ ವಿವರಗಳನ್ನು **'ಗಾಂಧಿ ಸಾಕ್ಷಿ ಕಾಯಕ'** ತಂತ್ರಾಂಶಕ್ಕೆ ಅಳವಡಿಸಿ ಬಿಲ್ ಪಾವತಿ ಮಾಡುವ ಕುರಿತು.

ಉಲ್ಲೇಖ:
1. ಸರ್ಕಾರದ ಸುತ್ತೋಲೆ ಸಂಖ್ಯೆ: ಗ್ರಾಅಪ 116 ಗ್ರಾನೀಸ (2) 12, ದಿ:21.10.2013.
2. ಸರ್ಕಾರದ ಸುತ್ತೋಲೆ ಸಂಖ್ಯೆ: ಗ್ರಾಅಪ 46 ಗ್ರಾನೀಸ(2) 2014 ಮತ್ತು ಗಣಕ ಕೋಶ ಸಂಖ್ಯೆ: ಗ್ರಾಅಪ 03 ಗಣಕ ಕೋಶ-2013, ದಿ:8.4.2014.

---

ಮೇಲ್ಕಂಡ ವಿಷಯ ಕುರಿತಂತೆ ಉಲ್ಲೇಖಿತ ಸುತ್ತೋಲೆ ಆದೇಶಗಳಲ್ಲಿ NRDWPಯಡಿ ಅನುಷ್ಠಾನಗೊಳಿಸುವ ಎಲ್ಲಾ ಗ್ರಾಮೀಣ ಕುಡಿಯುವ ನೀರಿನ ಬಾಬ್ತಿನ ಕಾಮಗಾರಿಗಳ ಬಿಲ್ ಪಾವತಿ ಕುರಿತು ಗಾಂಧಿ ಸಾಕ್ಷಿ ಕಾಯಕ ತಂತ್ರಾಂಶದಿಂದ ಸೃಜಿಸಲಾಗುವ ಪಾವತಿ ಆದೇಶದ ಮೂಲಕ ಬಿಲ್ ಪಾವತಿ ಮಾಡಲು ಕ್ರಮವಹಿಸಬೇಕಾಗಿದೆ. ಸದರಿ ಮಾಹಿತಿಯನ್ನು IMISನಲ್ಲಿಯೂ ಸಹ ದಾಖಲಿಸಲು ಜಿಲ್ಲಾ ಪಂಚಾಯತಿಗಳ PREDಗಳಿಗೆ ಸೂಚಿಸಲಾಗಿದೆ ಹಾಗೂ ಸರ್ಕಾರದ ಉಲ್ಲೇಖಿತ ಪತ್ರ / ಸುತ್ತೋಲೆಯಲ್ಲಿ ನಿಗದಿಪಡಿಸಲಾದ ನಮೂನೆಯಲ್ಲಿ ಬ್ಯಾಂಕ್‌ಗೆ ಮಾಹಿತಿ ನೀಡಬೇಕು.

......2

ಮೇಲ್ಕಂಡ ಹಿನ್ನೆಲೆಯಲ್ಲಿ ಇನ್ನು ಮುಂದೆ ಯಾವುದೇ ಜಿಲ್ಲೆಯ ಬಿಲ್ ಪಾವತಿಗೆ authorization ಬಂದಲ್ಲಿ ಅದು ಗಾಂಧಿ ಸಾಕ್ಷಿ ಕಾಯಕ ತಂತ್ರಾಂಶದಿಂದ ಸೃಜಿಸಲಾಗುವ ಪಾವತಿ ಆದೇಶದ ನಮೂನೆಯಲ್ಲಿರಬೇಕಾಗಿದೆ. **'ಗಾಂಧಿ ಸಾಕ್ಷಿ ಕಾಯಕ'** ತಂತ್ರಾಂಶದಲ್ಲಿ authorization ಮಾಡಿರುವ ಕಾಮಗಾರಿಯ ವಿವರಗಳನ್ನು ಗ್ರಾಅಪಂ.ರಾಜ್ ಇಲಾಖೆಯ ವೆಬ್‌ಸೈಟ್ www.rdpr.kar.nic.in ↵ ಇ-ಉಪಕ್ರಮಗಳು ↵ ಗಾಂಧಿ ಸಾಕ್ಷಿ ಕಾಯಕ ↵ ಕಾಮಗಾರಿ ಹಂತಗಳು ↵ ಗ್ರಾಮೀಣ ನೀರು ಸರಬರಾಜು ↵ ತಾಲ್ಲೂಕು / ಗ್ರಾಮ / ಜನವಸತಿ - ಬಿಲ್ ಪಾವತಿಗೆ ಸಂಬಂಧಪಟ್ಟ ವಿವರಗಳನ್ನು ನೇರವಾಗಿ ಬ್ಯಾಂಕ್ ವಕ್ತಾರರು ವೀಕ್ಷಿಸಿ ಪರಿಶೀಲಿಸಬಹುದಾಗಿದೆ. ಅಂತೆಯೇ, ಇನ್ನು ಮುಂದೆ ಯಾವುದೇ ಕಾಮಗಾರಿ ಬಿಲ್ ಪಾವತಿಯಾಗಬೇಕಾದಲ್ಲಿ **ಗಾಂಧಿ ಸಾಕ್ಷಿ ಕಾಯಕ** ತಂತ್ರಾಂಶದಲ್ಲಿ ಸದರಿ ಬಿಲ್‌ನ ಮಾಹಿತಿ ದಾಖಲಾಗಿರಬೇಕು ಮತ್ತು ಬಿಲ್ ಪಾವತಿಗೆ ಅರ್ಹರಾಗಿರಬೇಕೆಂಬ ಅಂಶವನ್ನು ಧೃಡಪಡಿಸಿಕೊಳ್ಳಬೇಕೆಂದು ತಿಳಿಸಿದೆ.

ತಮ್ಮ ವಿಶ್ವಾಸಿ,

(ರಾಮಕೃಷ್ಣ) 13/8/14

ಸರ್ಕಾರದ ಉಪ ಕಾರ್ಯದರ್ಶಿ(ಗ್ರಾನೀಸ)
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ
ಫ್ಯಾಕ್ಸ್:22203175, ಫೋನ್:080-22032806
ಇ-ಮೇಲ್ : rk3452000@yahoo.co.in

ಇವರಿಗೆ:

1. ರಾಜ್ಯ ಎಲ್ಲಾ(30) ಜಿಲ್ಲಾ ಪಂಚಾಯತ್‌ಗಳ ಅಧ್ಯಕ್ಷರುಗಳು ಹಾಗೂ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು.
2. ಮುಖ್ಯ ಇಂಜಿನಿಯರ್, ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆ, ಗ್ರಾಮೀಣಾಭಿವೃದ್ಧಿ ಭವನ, 2ನೇ ಮಹಡಿ, ಆನಂದರಾವ್ ವೃತ್ತ, ಬೆಂಗಳೂರು.
3. ರಾಜ್ಯದ ಎಲ್ಲಾ(8) ಅಧೀಕ್ಷಕ ಅಭಿಯಂತರರು, ಪಂಚಾಯತ್ ರಾಜ್ ಇಂಜಿನಿಯರಿಂಗ್ ವೃತ್ತಗಳು.
4. ರಾಜ್ಯದ ಎಲ್ಲಾ (38) ಕಾರ್ಯಪಾಲಕ ಇಂಜಿನಿಯರ್‌ಗಳು, ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗಗಳು, ಮತ್ತು
5. ರಾಜ್ಯದ ಎಲ್ಲಾ (176) ತಾಲ್ಲೂಕು ಪಂಚಾಯತ್‌ಗಳ ಕಾರ್ಯನಿರ್ವಾಹಕ ಅಧಿಕಾರಿಗಳು.
6. ಮ್ಯಾನೇಜರ್ ಸಿಂಡಿಕೇಟ್ ಬ್ಯಾಂಕ್, BWSSB Branch, ರಾಜಧೂತ್ ಕಾಂಪ್ಲೆಕ್ಸ್, ಅವೆನ್ಯೂ ರಸ್ತೆ, ಬೆಂ-09.
7. ಮ್ಯಾನೇಜರ್ ಕಾರ್ಪೋರೇಷನ್ ಬ್ಯಾಂಕ್, ಮಲ್ಲೇಶ್ವರಂ ಶಾಖೆ, ಬೆಂಗಳೂರು-03.
8. ಶಾಖಾಧಿಕಾರಿ, ರವಾನೆ ಮತ್ತು ಸ್ವೀಕೃತಿ ಶಾಖೆ, ಗ್ರಾಅಪಂ.ರಾಜ್ ಇಲಾಖೆ (ವಾರದ ಗೆಜೆಟ್‌ನಲ್ಲಿ ಪ್ರಕಟಿಸಲು 5 ಪ್ರತಿಗಳು).
9.

ಪ್ರತಿ:

1. ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂ. ರಾಜ್ ಸಚಿವರ ಆಪ್ತ ಕಾರ್ಯದರ್ಶಿಗಳು.
2. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ / ಕಾರ್ಯದರ್ಶಿ(ಪಂ.ರಾಜ್) / ಆಯುಕ್ತರು (ಗ್ರಾಮೀಣಾಭಿವೃದ್ಧಿ) / ನಿರ್ದೇಶಕರು (ಇ-ಆಡಳಿತ) / ಆಂತರಿಕ ಆರ್ಥಿಕ ಸಲಹೆಗಾರರು ಇವರ ಆಪ್ತ ಕಾರ್ಯದರ್ಶಿಗಳು / ಆಪ್ತ ಸಹಾಯಕರು, ಗ್ರಾಅಪಂ.ರಾಜ್ ಇಲಾಖೆ.
3. ನಿರ್ದೇಶಕರು, SWSM ಕಾವೇರಿ ಭವನ, ಬೆಂಗಳೂರು-9
4. ಮುಖ್ಯ ಸಂಪಾದಕರು ಮತ್ತು ಸಂಪರ್ಕಾಧಿಕಾರಿ "ಕರ್ನಾಟಕ ವಿಕಾಸ" ಗ್ರಾಅಪಂ.ರಾಜ್ ಇಲಾಖೆ, ಬೆಂಗಳೂರು